ಹೀಗಾಗ್ತದ ಅಂತ ಅಲ್ಲ, ನನ್ನ ಮಟ್ಟಿಗಂತೂ ಇದು ನಿಜ ಅನ್ನಿಸ್ತದ. ಈ ಹಾಡ್ಗಳನ್ನ ಜನರ ಜೊತಿಗಿದ್ದೇ ಹಾಡ್ತಾ, ಇಲ್ಲಿನ ಬದ್ಕು ಬದುಕ್ತಾ ಇದ್ದೀವಿ. ಯಾರ್ದೋ ಏನೋ ಉಪದೇಶ ಮಾಡ್ಲಕ್ಕೋಗದೆ ನಾವು ಇದನ್ನ ಬದುಕಬೇಕು ಅಂತೇಳಿ ಇದ್ದೇವಿ... ಮುಂದ ನೋಡಾದು...

◆ **ನಮ್ಮಲ್ಲಿ ತುಂಬ ಜನರು ಕತೆಗಳನ್ನ ಮನರಂಜನೆಗಾಗಿ ಓದುತ್ತಾರೆ ಅಥವಾ ಕತೆಗಳು ಇರೋದೇ ಮನರಂಜನೆಗಾಗಿ ಅಂತ ಭಾವಿಸ್ತಾರೆ. ಆದರೆ, ನಿಮ್ಮ ಹಾಡು, ಅದರೊಳಗಿನ ಕತೆಗಳನ್ನ ಕೇಳಿದರೆ ಅವಕ್ಕೆ ಮನರಂಜನೆಗಿಂತ ಬದುಕು ಮುಖ್ಯ, ಅದರ ಪಾಡು ಮುಖ್ಯ ಅನ್ನೋದು ಮನದಟ್ಟಾಗುತ್ತೆ. ಈ ಕಾಲವು ನೀವು ಹಾಡುತ್ತಾ ಇರೋದನ್ನ 'ಜನಪದ' ಅನ್ನುತ್ತೆ. ಆದರೆ, ಯಲ್ಲಮ್ಮನಾಟ, ಚೌಡಿಕಿ ಪದಗಳು ಒಂದು ಸಮುದಾಯದ ಜನರ ಬದುಕಿನ ಭಾಗ. ಕತೆ ಮತ್ತು ವಾಸ್ತವ ಲೋಕದ ನಡುವಿನ ಈ ಜಿಗಿತವನ್ನ ನೀವು ಹೇಗೆ ನೋಡ್ತೀರಿ?**

ಇದ್ರೊಳಗ ಯಾವ್ದು ಬದ್ಕು, ಯಾವ್ದು ಕಲಿ ಅನ್ನಾದು ತುಂಬ ಮಸುಕಾಗ್ಯದ. ಯಲ್ಲಮ್ಮನಾಟದ ಮೂಲಕ ನಂಗೆ ಸಿಕ್ಕ ದೊಡ್ಡ ಪಾಠ ಏನಂದ್ರ – ರಂಗಭೂಮಿಗೂ, ಜನಪದದಾಟಕ್ಕೂ ಇರೋ ವ್ಯತ್ಯಾಸ ಏನು ಅನ್ನಾದು. ಹೌದು... ಸಾಹಿತ್ಯವಾಗಿ ನಾವು ಕತೆ ಬರ್ದಾಗ ಅದು ಒಂದು ಹಂತದ ತನ್ಕ ಮನರಂಜನೆಗೆ, ಓದಿನ ಖುಷಿಗೆ ಅಂತ ಇರ್ತದ. ಆದ್ರ ಓರಲ್ ಪರಂಪರೆ ಒಳ್ಗ ಆ ಕತೇನೆ ಅವ್ರ ಇತಿಹಾಸ ಆಗ್ತದ, ಕಲ್ಚರಲ್ ಪ್ರಾಪರ್ಟಿನೂ ಆಗ್ತದ, ಅವ್ರ ಜಾತಿ ಐಡೆಂಟಿಟಿ ಆಗ್ತದ... ಆ ಕತಿ ಒಳ್ಗ ಅವ್ರು ದಿನನಿತ್ಯದ ಕಷ್ಟಗಳ್ನ ಹೇಳ್ಕೊಂಡಿರ್ತಾರ. ಹಂಗಾಗಿ ಈ ಕತಿಗಳ್ನ ನಾವು ಯಾರೋ ಒಬ್ರ ಬದ್ಕಿನ ಘಟನೆ ಆಗಿ ದಾಖಲೆ ಮಾಡಕ್ಕಾಗಂಗಿಲ್ಲ, ಅವು ಒಂದು ಸಮುದಾಯದ ದಾಖಲೆ ಅದಾವ. ಒಂದು ಕಮ್ಯುನಿಟಿ ಅನ್ನಾದು ತನ್ನನ್ನ ದಾಖಲಿಸ್ತಾ ಹೋಗಾದನೆ ಹಾಡ್ಗಳಲ್ಲಿ, ಕೆಲವೊಂದು ರಿಚುವಲ್‌ನಲ್ಲಿ, ಕುಣಿತದಲ್ಲಿ, ಬಳಸೋ ವಾದ್ಯದಲ್ಲಿ. ನಾನು ಯಲ್ಲಮ್ಮನಾಟ ಮಾಡೊವಾಗ ನಟಿ ಆಗಿರ್ತೀನಿ, ಬಾಕಿಯಂತೆ ದಿನದಾಗ ಬ್ಯಾರೆ ಏನೋ ಕೆಲ್ಸಾನು ಮಾಡ್ಕೊತಿರ್ತಿನಿ, 'ಆಟ'ದಾಗ ಇವೆರಡನ್ನೂ ತೋರಿಸ್ತೀನಿ... 'ಆಟ' ನಡ್ಯೋ ಹೊತ್ತಿನ್ಯಾಗ ಕತಿ ಬೆಳಸಾಕೆ ಯಾವತ್ತೂ ಜಾಗ ಇರ್ತದ, ಯಲ್ಲಮ್ಮನಾಟದ ಬ್ಯೂಟಿನೇ ಇದು. ಆದ್ರೆ ರಂಗಭೂಮಿನಾಗೆ ನಾವು ಹಿಂಗೆ ಮಾಡ್ಲಕ್ಕಾಗಾಂಗಿಲ್ಲ. 'ಕತೆ'ನ ಬರೆಯೋಕ್ಕೆ ಶುರು ಆದಾಗಿಂದ ಮತ್ತು ರಂಗಭೂಮಿಗಳು ಏನು ಮಾಡ್ಯಾವ ಅಂದ್ರ 'ಜನಪದ' ಪ್ರಕಾರದಿಂದ ನಂಟು ಕಳಚಿಕೊಂಡಾವ. ರಂಗಭೂಮಿನಾಗ ದುಡ್ಡು ಕೊಟ್ಟು, ಲೈಟ್ ಆಫ್ ಮಾಡಿ, ಸದ್ದು ಮಾಡದೆ ಕೂತು ನಾಟಕ ನೋಡೊ ವಾತಾವರಣದಾಗ ಕಲಾವಿದ ಅನ್ನೋನು



ದೇವರಾಗಿ ಬಿಡ್ತಾನ. ಯಲ್ಲಮ್ಮನಾಟದೊಳಗ ಈಕಡಿ ಒಂದು ಕೂಸು ಹೇಲ್ತಿರ್ತದ, ಆ ಕಡಿ ಒಂದಜ್ಜ ಬೀಡಿ ಸೇದ್ತಿರ್ತಾನ, ಯಾರೋ ಎಲಿಅಡ್ಕಿ ಹಾಕ್ಕೊತಿರ್ತರ... ಒಂದು ಜನಪದ ಪ್ರಕಾರದೊಳಗ ಇಡೀ ಬದುಕನ್ನೇ ಅದು ಇರಾ ಹಂಗೆ ಒಳಗ ತಗೊತಾರ.

ನಾವು ಯಲ್ಲಮ್ಮನಾಟನ ವೇದಿಕೆ ಮೇಲೆ ಮಾಡ್ಬೇಕಂದಾಗ ಯಲ್ಲಮ್ಮನ ಕತಿ ಹೇಳಾದು, ಇದ್ರ ಜೊತಿಗಿನೆ ಈ ಕಲಾಪ್ರಕಾರದ ಬಗ್ಗೆ ವಿವರಿಸೋದು, ಇಂಟರ್‌ನಲಿ ಅದು ನಮ್ಮನ್ನ ಹ್ಯಾಂಗ ಬದಲಾಯಿಸ್ತು ಅಂತ ಹೇಳಾದು, ಇಷ್ಟುನ್ನೂ ಸೇರಿಸಿದ್ವಿ. ಈ ಹೆಣಿಗಿ 'ಯಲ್ಲಮ್ಮ ಅಂಡ್ ಅದರ್ ಸ್ಟೋರೀಸ್' ಆಗಿ ಬೆಳೀತು.